ಕೃಷಿ ಹಿಡುವಳಿ ಒತ್ತುವರಿ ಭೂಮಿಯನ್ನು ಸಕ್ರಮಗೊಳಿಸುವುದು

448 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *0.15 ಗುಂಟೆಗಿಂತ ಕಡಿಮೆ ಇರುವ ಕೃಷಿ ಹಿಡುವಳಿ ಒತ್ತುವರಿ ಭೂಮಿಯನ್ನು ರೈತರಿಗೆ ಸಕ್ರಮಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಆ) *ರೈತರಿಗೆ ಈಗ ಅರ್ಜಿ ಸಲ್ಲಿಸಲು ಸರ್ಕಾರದವರು ಏನೇನು ಕ್ರಮ ಕೈಗೊಂಡಿದೆ?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94ಕ್ಕೆ ತಿದ್ದುಪಡಿ ಮಾಡಿ 1991ರಲ್ಲಿ ಕಲಂ 94 'ಎ' ಇದನ್ನು ಕಾಯ್ದೆಯಲ್ಲಿ ಸೇರ್ಪಡಿಸಿ ಕೆಲವು ವಿಶಿಷ್ಟ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಕೆರೆ ಅಂಗಳ, ಗುಂಡುತೋಪು ಅಮೃತಮಹಲ್ ಕಾವಲ್ ಮುಂತಾದ ಜಮೀನುಗಳನ್ನು ಹೊರತುಪಡಿಸಿ ಗೋಮಾಳ ಸೇರಿದಂತೆ ಉಳಿದ ಸರ್ಕಾರಿ ಜಮೀನುಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಆಗಿರುವ ಒತ್ತುವರಿಯನ್ನು ಸಕ್ರಮೀಗೊಳಿಸುವ ಯೋಜನೆಯು ಜಾರಿಗೆ ಬಂದಿರುತ್ತದೆ. ಸದರಿ ಯೋಜನೆಯಡಿಯಲ್ಲಿ ದಿನಾಂಕ 14-4-90ರ ಹಿಂದೆ ಆಗಿರುವ ಒತ್ತುವರಿಗಳನ್ನು ಸಕ್ರಮಗೊಳಿಸಲು ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 19-9-91 ಆಗಿರುತ್ತದೆ, ಹಾಗೂ ಒತ್ತುವರಿದಾರರ ಸ್ವಂತ ಹಿಡುವಳಿ ಜಮೀನು ಸಹ ಸೇರಿಸಿ ಸಕ್ರಮಗೊಳಿಸುವ ಸರ್ಕಾರಿ ಜಮೀನು 2-00 ಹೆಕ್ಟೇರ್ ಕೃಷಿ ಜಮೀನು ಅಂದರೆ 5-00 ಎಕರೆಗಿಂತ ಹೆಚ್ಚಾಗುವಂತಿಲ್ಲ.

ಆ) ಸದರಿ ಬಗರ್‌ಹುಕುಂ ಸಕ್ರಮಗೊಳಿಸುವ ಯೋಜನೆಯಡಿಯಲ್ಲಿ ಈಗಾಗಲೇ ಕೊನೆಯ ದಿನಾಂಕ 19-9-91ರ ವರೆಗೆ 10,86,826 ಅರ್ಜಿಗಳನ್ನು ಸ್ವೀಕರಿಸಲಾಗಿರುವುದರಿಂದ ಮತ್ತೊಮ್ಮೆ ಕಾಲಾವಕಾಶವನ್ನು ವಿಸ್ತರಿಸುವುದು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

ಶಕ್ತಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಹುಬ್ಬಳ್ಳಿ

212 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ನಗರದಲ್ಲಿರುವ ಶಕ್ತಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯ ಈಗಿದ್ದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಸರ್ಕಾರ ನೇಮಿಸಿರುವ ಆಡಳಿತಾಧಿಕಾರಿಯು ಸೊಸೈಟಿಯ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದಾರೆಯೇ?*

ಆ) *ಇಲ್ಲವಾದಲ್ಲಿ ಕಾರಣಗಳೇನು ಮತ್ತು ಈ ಕುರಿತು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು?*

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಇಲ್ಲ.

ಆ) ಸಹಕಾರ ಸಂಘಗಳ ಕಾಯ್ದೆ ಕಲಂ 30(1)ರ ಕೆಳಗೆ ಆಡಳಿತ ಮಂಡಳಿಯನ್ನು ರದ್ದುಪಡಿಸಿ ದಿನಾಂಕ : 23-9-1995ರಂದು ಸಹಕಾರ ಸಂಘಗಳ ಉಪ ನಿಬಂಧಕರು, ಧಾರವಾಡ ಇವರು ಹೊರಡಿಸಿದ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ 26-11-1995ರಂದು ತಡೆಯಾಜ್ಞೆ ನೀಡಿದೆ.

ಹುಬ್ಬಳ್ಳಿ ನಗರದ ಸೆಂಟ್ರಲ್ ಬಸ್ ಸ್ಟ್ಯಾಂಡಿನ ಸ್ಥಳಾಂತರ

213 - ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?